● **ಈ ಜಾಗತೀಕರಣದ ಸಂಕೀರ್ಣತೆಗಳನ್ನು ಸರಿಯಾದ ತಂತುಗಳಲ್ಲಿ ಹಿಡಿಯುವ ಕ್ರಮ ನಮಗೆ ದಕ್ಕಿದೆ ಅಂತ ಅನ್ನಿಸುತ್ತಾ? ಕಪ್ಪು–ಬಿಳಿಯ ವರ್ಗೀಕರಣದಲ್ಲಿ ಕ್ಲೀಷೆಯಾದ ಗ್ರಹಿಕೆಗಳೇ ಕಾಣಿಸುತ್ತಿವೆ. ಅದನ್ನು ಅಥಾರಿಟೇಟಿವ್ ಆಗಿ ಗ್ರಹಿಸಲು ಬೇಕಾದ ಸಿದ್ಧತೆ ಕನ್ನಡಕ್ಕೆ ಬೇಕಿದೆ ಅಂತ ಅನ್ನಿಸುತ್ತ?**

ಜಾಗತೀಕರಣವು ಕೇವಲ ಆರ್ಥಿಕ ಬದಲಾವಣೆಯಲ್ಲ, ಅದು ಮನಸ್ಸು ಮತ್ತು ಬುದ್ಧಿಯ ಪದರಗಳನ್ನ ಅನೇಕ ರೀತಿಯಿಂದ ಆವರಿಸಿಕೊಂಡಿರುವ ಒಂದು ಮಹತ್ವದ ವಿದ್ಯಮಾನ. ಸೋರುವ ಸೂರಿನಲ್ಲಿ ಅದೃಶ್ಯ ಸಂದಿಗಳಿಂದ ನೀರು ಹಾದು ಜಿನುಗುವ ಹಾಗೆ ಇದು ನಮ್ಮ ಕೈಮೀರಿ ಸಮಾಜದ ಸರ್ವಾಂಗ ವ್ಯಾಪಿಸಿಕೊಂಡಿದೆ. ನಮ್ಮ ಸಂಬಂಧಗಳು, ಜೀವನದ ಅಪೇಕ್ಷೆಗಳು, ಪ್ರೇಮ–ಕಾಮಗಳು, ನೈತಿಕ ನಿಲುವುಗಳು ನೂರೆಂಟು ಬಗೆಯಲ್ಲಿ ಇದಕ್ಕೆ ತಳುಕು ಹಾಕಿಕೊಂಡಿವೆ. ನಾವು ಆ ಸಂಕೀರ್ಣತೆಯನ್ನು ಗುರುತಿಸಿದಾಗ ಮಾತ್ರ ಈ ಕಾಲದ ಬಹುಮುಖ್ಯ ಘಟನೆಯಾದ ಜಾಗತೀಕರಣದೊಡನೆಯ ನಮ್ಮ ಸಂಬಂಧವೂ ಅರ್ಥವಾಗುತ್ತದೆ. ನಾವೆಲ್ಲರೂ ಒಂದಲ್ಲ ಒಂದು ಬಗೆಯಲ್ಲಿ, ಕಣ್ಣಿಗೆ ಕಾಣದ ರೀತಿಯಲ್ಲಿ ಜಾಗತೀಕರಣದ ಫಲಾನುಭವಿಗಳು. ಆ ಮಾರ್ಗದಲ್ಲಿ ಮತ್ತೇನನ್ನೋ ಕಳೆದುಕೊಂಡಿದ್ದೇವೆ ಕೂಡ. ಆದರೆ ಜಾಗತೀಕರಣವನ್ನು ಕಟುವಾಗಿ ವಿಮರ್ಶಿಸುವಾಗ ಎರಡನ್ನೂ ಗಮನದಲ್ಲಿಟ್ಟುಕೊಳ್ಳದೇ ಹೋದರೆ ವೈಯಕ್ತಿಕ ಜೀವನಕ್ಕೂ ಸಾರ್ವಜನಿಕ ನಿಲುವಿಗೂ ವ್ಯತ್ಯಾಸ ಬಂದು ಎಡಬಿಡಂಗಿಗಳಾಗುತ್ತೇವೆ. ಕನ್ನಡ ಸಾಹಿತ್ಯದಲ್ಲಿರುವ ತಪ್ಪು ಗ್ರಹಿಕೆಯೆಂದರೆ ಜಾಗತೀಕರಣದ ಬಗ್ಗೆ ಮಾತಾಡಬಲ್ಲವರು ಬರೀ ಸಿಟಿಯ ರೈಟರ್ಸ್, ಐಟಿ ಅಥವಾ ಟೆಕ್ನಾಲಜಿ ಕ್ಷೇತ್ರದಲ್ಲಿರುವವರು ಅನ್ನೋದು. ಆದರೆ ಅಮರೇಶ ನುಗಡೋಣಿಯವರ ಎಷ್ಟೊಂದು ಕತೆಗಳು, ಗ್ರಾಮೀಣ ಕರ್ನಾಟಕದ ನೆಲದಲ್ಲಿಯೇ ಅರಳಿರುವ ಕತೆಗಳು, ಜಾಗತೀಕರಣದ ಕುರಿತಾಗಿವೆ. ಅದರ ಹಲವು ಮಗ್ಗಲುಗಳನ್ನು ಅವರು ಎಷ್ಟೊಂದು ಸೂಕ್ಷ್ಮವಾಗಿ ಶಕ್ತಿಯುತವಾಗಿ ತೋರಿಸಿದ್ದಾರೆ. ಈ ಕುರಿತು ಹೆಚ್ಚಿನ ಚರ್ಚೆಯಾಗಿಲ್ಲ. ಈಗ ಜಗತ್ತಿನೆಲ್ಲೆಡೆ ಬೆಳೆಯುತ್ತಿರುವ ಬಲಪಂಥೀಯ ಒಲವಿನ ಮೂಲದಲ್ಲಿ ಇರೋದು ಕೂಡ ಜಾಗತೀಕರಣವೇ. ಇಂತಹ ಸಂಕೀರ್ಣವಾದ ಸಂಗತಿಯನ್ನು ಸರಳೀಕೃತ ಗ್ರಹಿಕೆಗಳ ಮೂಲಕ ತೆಳುಗೊಳಿಸಬಾರದು.

● **ಕನ್ನಡದ ಬರಹಗಳು ಬೇರೆ ಭಾಷೆಗಳಿಗೆ, ಮುಖ್ಯವಾಗಿ ಇಂಗ್ಲೀಷಿಗೆ ಹೋಗುವುದು ಎಷ್ಟು ಮುಖ್ಯ? ಇದನ್ನು ಎರಡು ರೀತಿ ಅರ್ಥ ಮಾಡಿಕೊಳ್ಳಬಹುದು. ಒಂದು ನನ್ನ ಬರವಣಿಗೆ ಹೆಚ್ಚು ಜನರನ್ನು ತಲುಪಬೇಕು ಅನ್ನುವ ತುಡಿತ. ಮತ್ತೊಂದು, ಹಾಗೆ ಅನುವಾದ ಆಗುವ ಕ್ರಿಯೆಯಲ್ಲಿ ತನ್ನ ಕೃತಿಯು ಮತ್ತೊಂದೇ ವಿಸ್ತಾರವನ್ನು ಪಡೆದುಕೊಳ್ಳುವ ಸಾಧ್ಯತೆ ಇದೆ ಅನ್ನುವುದು. ಈ ಅನುವಾದದ ಬಗ್ಗೆ ನಿಮ್ಮ ಅನಿಸಿಕೆ ಏನು?**

ಆಗಲೇ ಹೇಳಿದ ಹಾಗೆ ಪ್ರಕಟಣೆಯೇ ಬರವಣಿಗೆಯ ಅಂತಿಮ ಗುರಿಯಾಗಬಾರದು. ಇದು ಇನ್ನೂ ಮುಂದೆ. ಹಾಗಾಗಿ ಇಂಗ್ಲೀಷಿಗೆ ಅನುವಾದ ಆಗುವುದು ಬರವಣಿಗೆಯ ಗುಣಮಟ್ಟದ ದೃಷ್ಟಿಯಿಂದ ಅಷ್ಟು ಮಹತ್ವದ್ದು ಅಂತನ್ನಿಸುವುದಿಲ್ಲ. ಆದರೆ ಅನುವಾದ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಸಾಧ್ಯವಾದರೆ ಅದು ಬರವಣಿಗೆಯ ಕಸುಬಿನ ಬಗ್ಗೆ ಕೆಲವು ಒಳನೋಟಗಳನ್ನು ಕೊಡುತ್ತದೆ. ಕನ್ನಡದ ಎಷ್ಟೋ ಗಂಭೀರ ಮಾತುಗಳು ಇನ್ನೊಂದು ಭಾಷೆಯಲ್ಲಿ ಕ್ಷುಲ್ಲಕವಾಗಿ ತೋರುತ್ತವೆ. ಒಬ್ಬ ಸೃಜನಶೀಲ ಲೇಖಕನಿಗೆ ಈ ಅನುಭವ ಮುಖ್ಯ. ಅನುವಾದದಿಂದ ವಿಪುಲ ಸಂಖ್ಯೆಯಲ್ಲಿ ಓದುಗರು ದೊರೆಯುತ್ತಾರೆನ್ನುವುದು ನಿಜ. ಕನ್ನಡ ಸಂಸ್ಕೃತಿಯ ಅರಿವು ಇಲ್ಲದಿರುವಾಗಲೂ ಅದನ್ನು ಓದಿ ಪ್ರತಿಸ್ಪಂದಿಸುವ ಓದುಗರು ಕೃತಿಯನ್ನು ಗ್ರಹಿಸುವ ಕ್ರಮವೇ